ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರವರ ನ್ಯಾಯಾಲಯ, ಮೈಸೂರು

**ಎಸ್.ಸಿ. :9/2021**

| | | | |
|---|---|---|---|
| ಸಾಕ್ಷಿದಾರರ ಹೆಸರು | : | ಲೂರ್ಧ ಸ್ವಾಮಿ | ಪ್ರಮಾಣ ಮಾಡಿದ ದಿನಾಂಕ |
| ತಂದೆ ಹೆಸರು | : | ಮರಿ ಜೋಷೇಪ್ | **28.12.2023** |
| ವಯಸ್ಸು | : | 38 ವರ್ಷ | |
| ವೃತ್ತಿ | : | ಚಾಲಕ | ಪಿ.ಡಬ್ಲೂ: 7 |
| ವಾಸಸ್ಥಳ | : | ಮೈಸೂರು | ಸಿ.ಡಬ್ಲೂ: 4 |

**ಮುಖ್ಯ ವಿಚಾರಣೆ: ಮಾನ್ಯ ಸರ್ಕಾರಿ ಅಭಿಯೋಜಕರಿಂದ:**

ನ್ಯಾಯಾಲಯದ ಮುಂದಿರುವ ಆರೋಪಿತರ ಪರಿಚಯ ಇದೆ. ಚಾಸಾ– 5 ರವರ ಪರಿಚಯ ಇದೆ. ಈಗ 3–4 ವರ್ಷಗಳ ಹಿಂದೆ ನನ್ನ ಹಾಗೂ ನನ್ನ ಹೆಂಡತಿ ನಡುವೆ ಜಗಳವಾದ್ದರಿಂದ ಠಾಣೆಗೆ ಹೋದಾಗ , ಈಗ ನನಗೆ ತೋರಿಸಿದ ನಿಪಿ. 7 ರಮೇಲೆ ಸಹಿ ಮಾಡಿದ್ದೇನೆ . ಸಾಕ್ಷಿಯ ಸಹಿಯನ್ನು ನಿಪಿ 7 (ಬಿ) ಎಂದು ಗುರುತಿಸಲಾಯಿತು. ನಾನು ನಿಪಿ. 7 ಗೆ ಸಹಿ ಮಾಡುವಾಗ ನನ್ನೊಂದಿಗೆ ಬೇರೆ ಯಾರು ಅದಕ್ಕೆ ಸಹಿ ಮಾಡಿಲ್ಲ. ಆ ಸಮಯದಲ್ಲಿ ನನ್ನ ಸಮಕ್ಷಮ ಪೊಲೀಸರು ಯಾವುದೇ ವಸ್ತುವನ್ನು ವಶಕ್ಕೆ ಪಡೆದುಕೊಂಡಿಲ್ಲ. ಕುರಿಮಂಡಿ ಎ ಬ್ಲಾಕ್ ಹತ್ತಿರ ನನ್ನನ್ನು ಪೊಲೀಸರು ಕರೆಯಿಸಿರಲಿಲ್ಲ. ಮು. ಮಾ. 1 ರಿಂದ 6 ನ್ನು ಈ ಮೊದಲು ನಾನು ನೋಡಿಲ್ಲ. ಅವುಗಳ ಮೇಲಿರುವ ಚೀಟಿಯ ಮೇಲೆ ನನ್ನ ಸಹಿ ಇದೆ. ಆ ಸಹಿಗಳನ್ನು ನಾನು ಪೊಲೀಸರು ಕೊಟ್ಟ ಖಾಲಿ ಪೇಪರಗಳಿಗೆ ಮಾಡಿದ್ದೇನೆ. ಈಗ ನನಗೆ ತೋರಿಸಿದ ಸಾಕ್ಷಿ ಮುಚ್ಚಳಿಕೆ ಪತ್ರಕ್ಕೆ ನನ್ನ ಸಹಿ ಇದೆ ಅದನ್ನು ನಿಪಿ– 10 ಎಂದು, ಸಾಕ್ಷಿಯ ಸಹಿಯನ್ನು ನಿಪಿ.– 10 (ಎ) ಎಂದು ಗುರುತಿಸಲಾಯಿತು. ಅದರಲ್ಲಿ ಬರೆದ ವಿಷಯಗಳ ಬಗ್ಗೆ ಮಾಹಿತಿ ಇಲ್ಲ. ಆರೋಪಿತರು ಹಾಗೂ ಪ್ರಾಸಾ 1,2 ಹಾಗೂ 4 ರ ನಡುವೆ

ಗಲಾಟೆಯಾದ ವಿಷಯ ನನಗೆ ಗೊತ್ತಿಲ್ಲ. ಗಲಾಟೆಯನ್ನು ನಾನು ನೋಡಿಲ್ಲ. ನಾನು ಪೊಲೀಸರ ಮುಂದೆ ಹೇಳಿಕೆ ಕೊಟ್ಟಿಲ್ಲ.

**(ಈ ಹಂತದಲ್ಲಿ ಮಾನ್ಯ ಸರ್ಕಾರಿ ಅಭಿಯೋಜಕರ ವಿನಂತಿಯ ಮೇರೆಗೆ ಸಾಕ್ಷಿಯನ್ನು ಪ್ರತಿಕೂಲ ಎಂದು ಪರಿಗಣಿಸಿ ಪಾಟೀಸವಾಲು ಮಾಡಲು ಅನುಮತಿ ನೀಡಲಾಯಿತು)**

**ಪಾಟೀ ಸವಾಲುಃ ಮಾನ್ಯ ಸರ್ಕಾರಿ ಅಭಿಯೋಜಕರಿಂದಃ**

2. ದಿಃ 24.09.2017 ರಂದು ಬೆಳಿಗ್ಗೆ 9.15 ಗಂಟೆಯಿಂದ 10.30 ಗಂಟೆಯ ಅವಧಿಯಲ್ಲಿ ನನ್ನ , ಚಾಸಾ– 5 ರವರ ಸಮಕ್ಷಮ ಸ್ಥಳ ಪಂಚನಾಮೆಯನ್ನು ಪೊಲೀಸರು ಜರುಗಿಸಿದರು ಎಂದರೆ ಸರಿಯಲ್ಲ. ಸ್ಥಳ ಪರಿಶೀಲನೆ ಸಮಯದಲ್ಲಿ ಸ್ಥಳದಲ್ಲಿ ರಕ್ತದ ಕಲೆಗಳು ಕಂಡು ಬಂದಿದ್ದು , ರಕ್ತ ಮಿಶ್ರಿತ ಡಾಂಬರ್ ಚಕ್ಕೆಯನ್ನು ಕೆತ್ತಿ ತೆಗೆದುಕೊಂಡೆವು ಹಾಗೂ ಸಾದಾ ಮಣ್ಣು ಹಾಗೂ ಅರಳಿ ಮರದ ಎಲೆಗಳನ್ನು 3 ಕಬ್ಬಿಣದ ರಾಡ್ ಗಳನ್ನು ಹಾಗೂ ಒಂದು ಚಾಕುವನ್ನು ಪಂಚನಾಮೆ ಕಾಲಕ್ಕೆ ಸ್ಥಳದಿಂದ ಪೊಲೀಸರು ನಮ್ಮ ಸಮಕ್ಷಮ ವಶಕ್ಕೆ ಪಡೆದುಕೊಂಡರು ಎಂದರೆ ಸರಿಯಲ್ಲ.

3. ಜಪ್ತು ಮಾಡಿದ ವಸ್ತುಗಳನ್ನು ಈಗಾಗಲೇ ಮು. ಮಾ.1 ರಿಂದ 6 ಎಂದು ಗುರುತಿಸಲಾಗಿದೆ ಎಂದರೆ ಸರಿಯಲ್ಲ. ಅವುಗಳ ಮೇಲೆ ನನ್ನ ಹಾಗೂ ಇನ್ನೊಬ್ಬ ಪಂಚರ ಸಹಿ ಇರುವ ಚೀಟಿಯನ್ನು ಸ್ಥಳದಲ್ಲಿ ಅಂಟಿಸಲಾಗಿದೆ ಎಂದರೆ ಸರಿಯಲ್ಲ.

4. ದಿಃ 21.09.2017 ರಂದು ವಿಷ್ಣುವರ್ಧನರವರ ಹುಟ್ಟು ಹಬ್ಬದ ಪ್ರಯುಕ್ತ ಆರೋಪಿತರು ಮೈಕ್ ಸೆಟ್ ನಲ್ಲಿ ಹಾಡು ಹಾಕಿಕೊಂಡು ಮದ್ಯ ಸೇವನೆ ಮಾಡಿ , ನೃತ್ಯ ಮಾಡುತ್ತಿದ್ದರು ಅದನ್ನು ಪ್ರಾಸಾ 1,2, 4 ನಿಂತುಕೊಂಡು ನೋಡುತ್ತಿದ್ದರು ಎಂದರೆ

ಸರಿಯಲ್ಲ.

5. ದಿಃ 23.09.2017 ರಂದು ರಾತ್ರಿ 9.30 ಗಂಟೆಗೆ ಪ್ರಾಸಾ 1,2,4 ಮೂವರು ಕುರಿಮಂಡಿ ಎ ಬ್ಲಾಕ್ ಮನೆ ನಂ.52 ರ ಬಳಿ ನಡೆದುಕೊಂಡು ಹೋಗುತ್ತಿದ್ದಾಗ ಆ ಸಮಯದಲ್ಲಿ ಆರೋಪಿತರು ಗುಂಪು ಕಟ್ಟಿಕೊಂಡು ಮಾರಕ ಅಸ್ತ್ರಗಳಾದ ಚಾಕು ಮತ್ತು ರಾಡ್ ಹಿಡಿದುಕೊಂಡು ಬಂದರು ಎಂದರೆ ಸರಿಯಲ್ಲ. ಆ ಮೂವರನ್ನು ಅಡ್ಡಹಾಕಿ ಅವಾಚ್ಯ ಶಬ್ದಗಳಿಂದ ಬೈದರು ಎಂದರೆ ಸರಿಯಲ್ಲ. ನಾವು ವಿಷ್ಣುವರ್ಧನ್ ರವರ ಹುಟ್ಟು ಹಬ್ಬ ಮಾಡುವಾಗ ನೀವು ಗೇಲಿ ಮಾಡುತ್ತಿರಾ ಎಂದು ಅವರೊಂದಿಗೆ ಜಗಳ ತೆಗೆದರು ಎಂದರೆ ಸರಿಯಲ್ಲ. ಆರೋಪಿ 2 ಪಳನಿಸ್ವಾಮಿ , 3 ಕಿರಣ, 6 ಸುರೇಶ್ ರವರು ರಾಡ್ ತೆಗೆದುಕೊಂಡು ಪ್ರಾಸಾ 1 ರವರ ತೋಳುಗಳಿಗೆ ಹೋಡೆದರು ಎಂದರೆ ಸರಿಯಲ್ಲ. 4 ನೇ ಆರೋಪಿ ದಾಸ ಪ್ರಾಸಾ 1 ರವರಿಗೆ ಕೈಗಳಿಂದ ತುಟಿಗೆ ಹಾಗೂ ಕಣ್ಣಿಯ ಭಾಗಕ್ಕೆ ಹಾಗೂ ಹಣೆಗೆ ಹೊಡೆದ ಎಂದರೆ ಸರಿಯಲ್ಲ. ಪ್ರಾಸಾ 1 ರವರಿಗೆ ಆರೋಪಿತರು ಹೊಡೆದು ರಕ್ತ ಗಾಯ ಮಾಡಿದ್ದರು ಎಂದರೆ ಸರಿಯಲ್ಲ . 1 ನೇ ಆರೋಪಿ ಪುಷ್ಪರಾಜ್ ಹಾಗೂ 8 ನೇ ಆರೋಪಿ ಮಣಿಕಂಠ ಪ್ರಾಸಾ 1 ರವರಿಗೆ ಕಾಲಿನಿಂದ ಒದ್ದರು ಎಂದರೆ ಸರಿಯಲ್ಲ. 1 ನೇ ಆರೋಪಿ ಪ್ರಾಸಾ 4 ರವರಿಗೆ ಚಾಕುವಿನಿಂದ 2 ಸಾರಿ ಹೊಟ್ಟೆಗೆ ತಿವಿದು ಗಾಯಮಾಡಿ ಕೊಲೆ ಮಾಡಲು ಪ್ರಯತ್ನಪಟ್ಟ ಎಂದರೆ ಸರಿಯಲ್ಲ. 2 ನೇ ಆರೋಪಿ ಹಾಗೂ 8 ನೇ ಆರೋಪಿತರು ಪ್ರಾಸಾ 4 ರವರಿಗೆ ರಾಡ್ ನಿಂದ ಕೈಕಾಲಿಗೆ ಹಾಗೂ ಹಣೆಗೆ ಹೊಡೆದರು ಎಂದರೆ ಸರಿಯಲ್ಲ. ಪ್ರಾಸಾ 2 ರವರಿಗೆ ಆರೋಪಿ 4 , 5 ಹಾಗೂ 7 ನೇ ಆರೋಪಿ ಅಂತೋನಿ ಮುಂದುಹೋದವರಿಗೆ ತಬ್ಬಿ ಹಿಡಿದುಕೊಂಡು 4 ನೇ ಆರೋಪಿ ಮುಷ್ಟಿಯಿಂದ ಬಾಯಿಗೆ ಗುದ್ದಿ ಗಾಯ ಮಾಡಿದರು ಎಂದರೆ ಸರಿಯಲ್ಲ. 5 ನೇ ಆರೋಪಿ ಪ್ರಾಸಾ 2 ರವನ್ನು ಕೆಳಗೆ

ಬಿಳಿಸಿದ್ದರಿಂದ ತಲೆಗೆ ಪೆಟ್ಟಾಗಿತ್ತು ಎಂದರೆ ಸರಿಯಲ್ಲ. ಪ್ರಾಸಾ 4 ಕೆಳಗೆ ಬಿದ್ದಾಗ 7 ನೇ ಆರೋಪಿ ಅವನಿಗೆ ಕಾಲಿನಿಂದ ತುಳಿದರು ಎಂದರೆ ಸರಿಯಲ್ಲ. ಕಾರ್ಯಕ್ರಮ ನೋಡುತ್ತಿದ್ದ ಸಾರ್ವಜನಿಕರು ಬಂದು ಜಗಳ ಬಿಡಿಸಿದ್ದರು ಎಂದರೆ ಸರಿಯಲ್ಲ.

6. ಈಗ ನನಗೆ ಓದಿ ಹೇಳಿದಂತೆ ನಿಪಿ. 11 ಹಾಗೂ 12 ರಂತೆ ಹೇಳಿಕೆ ಹಾಗೂ ಮರು ಹೇಳಿಕೆಯನ್ನು ಕೊಟ್ಟಿದ್ದೇನೆ ಎಂದರೆ ಸರಿಯಲ್ಲ. ಆರೋಪಿತರು ನನ್ನ ಸ್ನೇಹಿತರಾದ್ದರಿಂದ ಸಹಾಯ ಮಾಡಲು ಎಲ್ಲ ವಿಷಯಗಳು ಗೊತ್ತಿದ್ದರೂ ಸಹ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

**ಪಾಟೀ ಸವಾಲುಃ 1 ರಿಂದ 8 ನೇ ಆರೋಪಿತರ ಪರಃ ಇಲ್ಲ**

**ಮರು ವಿಚಾರಣೆಃ** ಇಲ್ಲ

ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.

ಓ ಹೇ ಕೇ ಸ ಇ ಎ ಒ.,

28.12.2023

(ಪ್ರಭಾವತಿ ಎಮ್ ಹಿರೇಮಠ)
ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು
ಮೈಸೂರು.